230

# ಜಿಲ್ಲಾಧಿಕಾರಿಗಳ ನ್ಯಾಯಾಲಯ, ಕೋಲಾರ ಜಿಲ್ಲೆ, ಕೋಲಾರ

ದಿನಾಂಕ:03/08/2016

**ಪ್ರಕರಣ ಸಂಖ್ಯೆ: ಆರ್‌ಎ. 101/2014-15**

ಉಪಸ್ಥಿತರು:ಶ್ರೀ.ಡಾ॥ ಕೆ.ವಿ.ತ್ರಿಲೋಕ್ ಚಂದ್ರ ಭಾ.ಆ.ಸೇ.,
ಜಿಲ್ಲಾಧಿಕಾರಿಗಳು,
ಕೋಲಾರ ಜಿಲ್ಲೆ.

| ಮೇಲ್ಮನವಿದಾರರು | ವಿರುದ್ಧ | ಎದುರುದಾರರು |
|---|---|---|
| 1. ಶ್ರೀಮತಿ ಸಾಕಮ್ಮ<br>ಬಿನ್ ಪುಟ್ಟಮ್ಮ<br>ಪೆರ್ಜೇನಹಳ್ಳಿ ಗ್ರಾಮ,<br>ವೇಮಗಲ್ ಹೋಬಳಿ,<br>ಕೋಲಾರ ತಾಲ್ಲೂಕು.<br>2. ಮುನಿಯಮ್ಮ<br>ಕೋಂ ದೊಡ್ಡತಮ್ಮಣ್ಣ<br>ಪೆರ್ಜೇನಹಳ್ಳಿ ಗ್ರಾಮ,<br>ವೇಮಗಲ್ ಹೋಬಳಿ,<br>ಕೋಲಾರ ತಾಲ್ಲೂಕು.<br>( ಶ್ರೀ ಎನ್.ಕೆ.ನಂಜುಂಡಗೌಡ<br>-ವಕೀಲರು ರವರಿಂದ) | | 1. ಸಹಾಯಕ ಕಮೀಷನರ್<br>ಕೋಲಾರ ಉಪವಿಭಾಗ<br>2. ತಹಶೀಲ್ದಾರ್<br>ಕೋಲಾರ ತಾಲ್ಲೂಕು<br>3. ಶ್ರೀ ಎಸ್.ರಾಮೇಗೌಡ<br>ಬಿನ್ ಎಸ್.ಡಿ.ಸೊಣ್ಣೇಗೌಡ<br>ಶೆಟ್ಟಿಹಳ್ಳಿ ಗ್ರಾಮ,<br>ಮೇಡಿಹಾಳ ಅಂಚೆ, ಕೋಲಾರ ತಾ.<br>4. ಎಸ್.ಎನ್.ಗುರುನಾಥ<br>ಬಿನ್ ಎಸ್.ಆರ್.ನಾರಾಯಣಗೌಡ<br>ಶೆಟ್ಟಿಹಳ್ಳಿ ಗ್ರಾಮ<br>5. ಚಿಕ್ಕಕೆಂಪಣ್ಣ ಬಿನ್ ನಾರಾಯಣಪ್ಪ<br>ಪೆರ್ಜೇನಹಳ್ಳಿ ಗ್ರಾಮ,<br>( ಶ್ರೀ ಎಂ.ಮುನೇಗೌಡ<br>-ವಕೀಲರು ರವರಿಂದ)<br>6. ಜಯರಾಮೇಗೌಡ ಎಸ್.ಎನ್.<br>ಬಿನ್ ನಂಜುಂಡಗೌಡ ಎಸ್.ಡಿ.<br>ಶೆಟ್ಟಿಹಳ್ಳಿ ಗ್ರಾಮ, ವೇಮಗಲ್ ಹೋ,<br>ಕೋಲಾರ ತಾಲ್ಲೂಕು.<br>( ಶ್ರೀ ಎಂ.ಶ್ರೀನಿವಾಸ್<br>-ವಕೀಲರು ರವರಿಂದ)<br>( 3 ಮತ್ತು 4 ರವರಿಗೆ<br>ಶ್ರೀ ಡಿ.ವೆಂಕಟರಾಮೇಗೌಡ<br>-ವಕೀಲರು ರವರಿಂದ) |

ವಿಷಯ: ಸಹಾಯಕ ಕಮೀಷನರ್ ಕೋಲಾರ ಉಪವಿಭಾಗ, ಕೋಲಾರ ರವರ ಕ್ರಮಾಂಕ: ಆರ್.ಆರ್.ಟಿ.(ತಿ)ಸಿ.ಆರ್. 201/2014-15 ದಿನಾಂಕ: 06/01/2014. ರ ಆದೇಶದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

0-0-0

ಪ್ರಸ್ತಾವನೆ.

ಈ ಮೇಲ್ಮನವಿ ಅರ್ಜಿಯನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ಕಲಂ 50 ರಂತೆ ಸಲ್ಲಿಸಿರುತ್ತಾರೆ.

...2

ಪ್ರಕರಣದ ಸಂಕ್ಷಿಪ್ತ ವಿವರ,

ಕೋಲಾರ ತಾಲ್ಲೂಕು, ವೇಮಗಲ್ ಹೋಬಳಿ, ಹುಲ್ಲಂಕಲ್ಲು ಗ್ರಾಮದ ಸ.ನಂ. 135/1 ರಲ್ಲಿನ 2-35 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಪಹಣಿ ಕಾಲಂ 09 ರಲ್ಲಿಯ ಖಾತೆದಾರರಾದ ಸಾಕಮ್ಮ ಕೋಂ ಪುಟ್ಟಮ್ಮ ಮತ್ತು ಮುನಿಯಮ್ಮ ರವರನ್ನು ರದ್ದುಪಡಿಸಿ ತಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡಲು ಕೋರಿ ಎಸ್.ರಾಮೇಗೌಡ ಬಿನ್ ಲೇಟ್ ಎಸ್.ಡಿ.ಸೋಣ್ಣೇಗೌಡ ರವರು ಅರ್ಜಿ ಸಲ್ಲಿಸಿದರ ಮೇರೆಗೆ ತಹಶೀಲ್ದಾರ್, ಕೋಲಾರ ತಾಲ್ಲೂಕು ರವರು ಸಂಖ್ಯೆ:ಆರ್.ಆರ್.ಟಿ/ಸಿಆರ್/373/2014-15 ದಿನಾಂಕ:11-11-2014 ರಂತೆ ಸಹಾಯಕ ಕಮೀಷನರ್, ಕೋಲಾರ ಉಪವಿಭಾಗ ರವರಿಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ತಹಶೀಲ್ದಾರರ ಪ್ರಸ್ತಾವನೆ ಮೇರೆಗೆ ಪ್ರಕರಣವನ್ನು ದಾಖಲಿಸಿಕೊಂಡು ವಿಚಾರಣೆ ನಂತರ ಸಂಖ್ಯೆ:ಆರ್.ಆರ್.ಟಿ(ತಿ)ಸಿಆರ್/201/2014-15 ರಲ್ಲಿ ದಿನಾಂಕ: 06/01/2014 ರಂದು ಹೊರಡಿಸಿದ ಆದೇಶದಲ್ಲಿ ತಹಶೀಲ್ದಾರರ ಪ್ರಸ್ತಾವನೆಯನ್ನು ಪುರಸ್ಕರಿಸಿ, ಎಂ.ಆರ್. ನಂ. 27/97-98 ನ್ನು ರದ್ದುಪಡಿಸಿರುತ್ತಾರೆ. ಹಾಗೂ ವಿವಾದಿತ ಜಮೀನಿಗೆ ಯಾರು ಮೂಲ ಹಕ್ಕುಳ್ಳವರು ಎಂಬ ಬಗ್ಗೆ ಕಂದಾಯ ದಾಖಲೆ ಮತ್ತು ಸರ್ವೆ ದಾಖಲೆಗಳನ್ನು ಪರಿಶೀಲಿಸಿ ನಿಯಮಾನುಸಾರ ತಿದ್ದುಪಡಿ ಮಾಡಲು ಕ್ರಮವಹಿಸುವಂತೆ ತಹಶೀಲ್ದಾರ್, ಕೋಲಾರ ತಾಲ್ಲೂಕು ರವರಿಗೆ ನಿರ್ದೇಶಿಸಿರುತ್ತಾರೆ. ಈ ಆದೇಶದಿಂದ ಬಾದಿತರಾದ ಮೇಲ್ಮನವಿದಾರರು ಈ ನ್ಯಾಯಾಲಯದಲ್ಲಿ ಪ್ರಸ್ತುತ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಪ್ರಕರಣವನ್ನು ದಾಖಲಿಸಿಕೊಂಡು ಉಭಯತ್ರರಿಗೂ ನೋಟೀಸು ನೀಡಿ ಪ್ರಕರಣವನ್ನು ವಿಚಾರಣೆಗೆ ತೆಗೆದುಕೊಳ್ಳಲಾಯ್ತು

ದಿನಾಂಕ:25/03/2015 ರಂದು ಪ್ರಕರಣವನ್ನು ವಿಚಾರಣೆಗೆ ತೆಗೆದುಕೊಂಡಾಗ ಉಭಯತ್ರರು ಹಾಜರು ಪ್ರಕರಣವನ್ನು ಮುಂದೂಡಲಾಯ್ತು. ಪ್ರಕರಣವು ವಿಚರಣಾ ಹಂತದಲ್ಲಿ ಇರುವಾಗ 4, 5 ಮತ್ತು 6ನೇ ಎದುರುದಾರರ ಪರವಾಗಿ ವಕೀಲರು ಸಿ.ಪಿ.ಸಿ ಆದೇಶ 1 ನಿಯಮ 10(1) ಓದಲಾದ ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 25 ರಂತೆ ಅರ್ಜಿ ಸಲ್ಲಿಸಿ ತಮ್ಮನ್ನು ಪ್ರಕರಣದಲ್ಲಿ ಸೇರಿಸಲು ಕೋರಿರುತ್ತಾರೆ. ಇವರ ಅರ್ಜಿಯನ್ನು ಪುರಸ್ಕರಿಸಿ ಎದರುದಾರರನ್ನಾಗಿ ಸೇರ್ಪಡೆ ಮಾಡಿಕೊಂಡು ವಿಚಾರಣೆಯನ್ನು ಮುಂದುವರಿಸಲಾಯಿತು. ಉಭಯತ್ರರಿಗೂ ಸಾಕಷ್ಟು ಕಾಲವಕಾಶ ನೀಡಿ ವಿಚಾರಣೆ ಮಾಡಿದೆ. ಉಭಯತ್ರರರ ವಕೀಲರು ಸಲ್ಲಿಸಿರುವ ಲಿಖಿತ ವಾದ ಮತ್ತು ಆಕ್ಷೇಪಣೆಗಳ ಮೇರೆಗೆ ಪ್ರಕರಣವನ್ನು ದಿನಾಂಕ:12/08/2015 ರಂದು ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಲಾಯ್ತು.

ಮೇಲ್ಮನವಿದಾರರು ಸಲ್ಲಿಸಿರುವ ಮೇಲ್ಮನವಿ ಮತ್ತು ಲಿಖಿತ ವಾದದಲ್ಲಿ ಕೋಲಾರ ತಾಲ್ಲೂಕು, ವೇಮಗಲ್ ಹೋಬಳಿ, ಹುಲ್ಲಂಕಲ್ಲು ಗ್ರಾಮದ ಸ.ನಂ. 135/1 ರಲ್ಲಿನ 2-35 ಗುಂಟೆ ಜಮೀನು ಅಕ್ಕಮ್ಮ ರವರಿಗೆ ದಿನಾಂಕ:30/06/1969 ರಂದು ಕ್ರಯದ ಮೂಲಕ ಬಂದಿರುವುದಾಗಿಯೂ ಇವರಿಂದ ದಿನಾಂಕ:14/10/1985 ರ ನೋಂದಾಯಿತ ಮರಣಶಾಸನದ ಮೂಲಕ ಮೇಲ್ಮನವಿದಾರರಿಗೆ ಹಕ್ಕು ಪ್ರಾಪ್ತಿಯಾಗಿರುತ್ತದೆ ಎಂಬುದಾಗಿ ನಿವೇದಿಸಿರುತ್ತಾರೆ. ಮೇಲ್ಮನವಿದಾರರು ಮಾನ್ಯ ಸಿವಿಲ್ ಜಡ್ಜ್ (ಜೂ.ಡಿ) ಕೋಲಾರ ರವರಲ್ಲಿ ಸಂಖ್ಯೆ:ಓ.ಎಸ್.59/2007 ರಂತೆ ಹಕ್ಕು ಘೋಷಣೆ ಹಾಗೂ ಶಾಶ್ವತ ನಿರ್ಬಂಧಿಕಾಜ್ಞೆ ಕೋರಿ ದಾವೆ ಹೂಡಿದ್ದು, ದಿನಾಂಕ:29/07/2009 ರಂದು ಮೇಲ್ಮನವಿದಾರರ ಪರವಾಗಿ ಆದೇಶವಾಗಿರುತ್ತದೆ. ಈ ಆದೇಶದ ವಿರುದ್ಧ ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲವೆಂದೂ, ಮಾನ್ಯ 2ನೇ ಹೆಚ್ಚುವರಿ ಸಿವಿಲ್ ಜಡ್ಜ್, ಕೋಲಾರ ರವರಲ್ಲಿ ಸಂಖ್ಯೆ:ಓ.ಎಸ್.139/2007 ರಂತೆ ಚೌಡಪ್ಪ ಬಿನ್ ಲೇಟ್ ರಾಮಪ್ಪ ಹಾಗೂ ಇತರರು ಮೇಲ್ಮನವಿದಾರರು ಹಾಗೂ ಇತರರ ವಿರುದ್ಧ ಭಾಗ ಕೋರಿ ದಾವೆ ಹೂಡಿದ್ದು, ಸದರಿ ದಾವೆ ವಜಾಗೊಂಡಿರುತ್ತದೆ ಎಂದು ವಾದಿಸಿರುತ್ತಾರೆ. ವಿವಾದಿತ ಜಮೀನಿಗೂ ಎದುರುದಾರರಿಗೂ ಯಾವುದೇ ಸಂಬಂಧ ಇರುವುದಿಲ್ಲವೆಂದು ವಾದಿಸಿ ಸೇರ್ಪಡೆಯಾಗಿರುವ ಎದುರುದಾರರ ಅರ್ಜಿಗೆ ಆಕ್ಷೇಪಣೆ ಸಲ್ಲಿಸಿರುತ್ತಾರೆ. ಈ ಎಲ್ಲಾ ಅಂಶಗಳನ್ನು ಪರಿಶೀಲಿಸದೆ ಮಾಡಿರುವ ಸಹಾಯಕ ಕಮೀಷನರ್ ರವರ ಆದೇಶವು ನ್ಯಾಯಸಮ್ಮತವಾಗಿಲ್ಲವೆಂದು ವಾದಿಸಿ, ತಮ್ಮ ಮೇಲ್ಮನವಿಯನ್ನು ಪುರಸ್ಕರಿಸುವ ಮೂಲಕ ಸಹಾಯಕ ಕಮೀಷನರ್ ರವರ ಪ್ರಶ್ನಿತಿ ಆದೇಶವನ್ನು ರದ್ದು ಪಡಿಸುವಂತೆ ಕೋರಿರುತ್ತಾರೆ.

ಮೂರನೇ ಮತ್ತು ನಾಲ್ಕನೇ ಎದುರುದಾರು ಪರವಾಗಿ ಮಂಡಿಸಲಾದ ಲಿಖಿತ ವಾದದಲ್ಲಿ ಕೋಲಾರ ತಾಲ್ಲೂಕು, ವೇಮಗಲ್ ಹೋಬಳಿ, ಹುಲ್ಲಂಕಲ್ಲು ಗ್ರಾಮದ ಸರ್ವೆ ನಂ. 135/1 ರಲ್ಲಿನ 2-35 ಎಕರೆ ಜಮೀನು

...3

ಮೂರನೇ ಎದುರುದಾರರ ತಾತ ದಿವಂಗತ ದೇವೇಗೌಡ ರವರಿಗೆ ಕಂದಾಯ ಹರಾಜ್(ರೆಸ್ಟೋರ್) ಮೂಲಕ ನಂ. 101/1931-32 ರಂತೆ ಬಂದಿದ್ದು, ಇವರು ಯಾರಿಗೂ ಪರಭಾರೆ ಮಾಡಿರುವುದಿಲ್ಲ ಎಂದು ವಾದಿಸಿರುತ್ತಾರೆ. ವಿವಾದಿತ ಜಮೀನಿನಲ್ಲಿ ಚಿಕ್ಕಕೆಂಪಣ್ಣ ಬಿನ್ ನಾರಾಯಣಪ್ಪ ರವರಿಗೆ ಯಾವುದೇ ವಿಧವಾದ ಹಕ್ಕು ಇಲ್ಲದಿದ್ದರೂ ತಪ್ಪಾಗಿ ಐ.ಎಲ್. ನಲ್ಲಿ ಕ್ರಯದ ಮೂಲಕ ಎಂದು ದಾಖಲಿಸಿರುವುದು ಹಾಗೂ ಎಂ.ಆರ್. 6/1978-79 ರಂತೆ ಅಕ್ಕಮ್ಮ ಕೋಂ ದೊಡ್ಡತಮ್ಮಣ್ಣ, ನಂತರ ಎಂ.ಆರ್.27/97-98 ರಂತೆ ಸಾಕಮ್ಮ ಬಿನ್ ಪುಟ್ಟಮ್ಮ ಮತ್ತು ಮುನಿಯಮ್ಮ ಕೋಂ ದೊಡ್ಡತಮ್ಮಣ್ಣ ರವರ ಹೆಸರಿಗೆ ವಿಲ್ ಮೂಲಕ ಪಹಣಿಯಲ್ಲಿ ನಮೂದಿಸಿರುವುದು ಸೃಷ್ಟಿತವಾಗಿರುತ್ತದೆ ಎಂದು ವಾದಿಸಿರುತ್ತಾರೆ. ನೋಂದಾಯಿತ ವಿಲ್ ಪತ್ರದ ಸಂಖ್ಯೆ 2889/1985-86 ದಿನಾಂಕ 14/10/1985 ರಲ್ಲಿ ಅಕ್ಕಮ್ಮ ರವರಿಗೆ ಸದರಿ ಸ್ವತ್ತು ಪ್ರಾಪ್ತಿಯಾದ ಬಗ್ಗೆ ಯಾವುದೇ ನಮೂದು ಇಲ್ಲದ ಕಾರಣ ಸದರಿ ಸ್ವತ್ತಿನ ಮೇಲೆ ಅಕ್ಕಮ್ಮ ರವರಿಗೆ ಯಾವುದೇ ವಿಧವಾದ ಹಕ್ಕು ಇರುವುದಿಲ್ಲ. ಆದರೂ ಸದರಿ ವಿಲ್ ಪತ್ರದಂತೆ ಖಾತೆ ಮಾಡುವಾಗ ಮ್ಯುಟೇಷನ್‌ನಲ್ಲಿ ಗ್ರಾಮಲೆಕ್ಕಿಗರ ಷರಾದಲ್ಲಿ ಸರ್ವೆ ನಂ. 137 ಸರ್ವೆ ನಂ. 135 ಕ್ಕೆ ತಾಳೆ ಎಂಬುದಾಗಿ ನಮೂದಿರುವುದೇ ದಾಖಲೆ ಪೋರ್ಜರಿ ಎಂದು ರುಜುವಾತಾಗುತ್ತದೆ ಎಂದು ವಾದಿಸಿರುತ್ತಾರೆ. ಮೂಲ ಹಕ್ಕುದಾರರಾದ ದೇವೇಗೌಡ ರವರು ಎಸ್.ಎ.ಗುಡೇಗೌಡ ಬಿನ್ ಅಣ್ಣೇಗೌಡ ರವರಿಗೆ ಪರಭಾರೆ ಮಾಡದ ಕಾರಣ ಎಸ್.ಎ.ಗುಡೇಗೌಡ ರವರು ಚಿಕ್ಕಕೆಂಪಣ್ಣ ರವರಿಗೆ ಮಾಡಿರುವ ಕ್ರಯ ಪತ್ರಕ್ಕೆ ಯಾವುದೇ ಮಾನ್ಯತೆ ಇರುವುದಿಲ್ಲ ಎಂದು ವಾದಿಸಿರುತ್ತಾರೆ. ಮೇಲ್ಮನವಿದಾರು ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ದಾಖಲಿಸಿರುವ ದಾವೆ ಸಂಖ್ಯೆ ಓ.ಎಸ್.59/2007 ರಲ್ಲಿ ಮೂರನೇ ಎದುರುದಾರನ್ನು ಪಾರ್ಟಿ ಮಾಡಿರುವುದಿಲ್ಲವಾದ್ದರಿಂದ ಸದರಿ ಆದೇಶವನ್ನು ಗಣನೆಗೆ ತೆಗೆದುಕೊಳ್ಳಬಾರದು ಎಂದು ವಾದಿಸಿರುತ್ತಾರೆ. ಮೇಲ್ಮನವಿದಾರರು ಮೂರನೇ ಎದುರುದಾರರ ಪಿತ್ರಾರ್ಜಿತ ಆಸ್ತಿಯನ್ನು ಪಡೆಯುವ ದುರುದ್ದೇಶದಿಂದ ಪೋರ್ಜರಿ ದಾಖಲೆಗಳೊಂದಿಗೆ ಪ್ರಸ್ತುತ ಮೇಲ್ಮನವಿ ಸಲ್ಲಿಸಿರುವುದರಿಂದ ಸಹಾಯಕ ಕಮೀಷನರ್ ರವರು ಈ ಎಲ್ಲಾ ಅಂಶಗಳನ್ನು ಪರಿಶೀಲಿಸಿ ಮಾಡಿರುವ ಆದೇಶ ಕಾನೂನುಬದ್ಧವಾಗಿದೆ ಎಂದು ವಾದಿಸಿ ಮೇಲ್ಮನವಿದಾರರ ಅರ್ಜಿಯನ್ನು ವಜಾಮಾಡಬೇಕೆಂದು ಕೋರಿರುತ್ತಾರೆ.

ಉಭಯತ್ರರ ವಾದ, ಪ್ರಶ್ನಿತ ಆದೇಶ ಹಾಗೂ ಕಡತದಲ್ಲಿ ಲಭ್ಯ ದಾಖಲೆಗಳನ್ನು ಪರಿಶೀಲಿಸಲಾಯ್ತು. ಕೋಲಾರ ತಾಲ್ಲೂಕು, ವೇಮಗಲ್ ಹೋಬಳಿ, ಹುಲ್ಲಂಕಲ್ಲು ಗ್ರಾಮದ ಸರ್ವೆ ನಂ. 135/1 ರಲ್ಲಿನ 2-35 ಎಕರೆ ಜಮೀನು ಐ.ಎಲ್. ಹಾಗೂ ಆರ್.ಆರ್. ದಾಖಲೆಯಂತೆ "ಕಂದಾಯ ಬಾಕಿಗೆ ಹರಾಜಾಗಿ ಸರ್ಕಾರಕ್ಕೆ ನಿಂತಿದೆ ಸಂಖ್ಯೆ 101/31-32 ದಿನಾಂಕ 29/3/1932", "ದ್ಯಾವೇಗೌಡ ಬಿನ್ ಗುಡೇಗೌಡ ಖಾತೆ ರೆಸ್ಟೋರ್ ದಿಂದ ಬಗೆ" ಎಂಬುದಾಗಿ ನಮೂದಾಗಿರುತ್ತದೆ. ಹಾಗೂ ನಂತರ ಸದರಿ ದಾಖಲೆಯಲ್ಲಿ ಚಿಕ್ಕ ಕೆಂಪಣ್ಣ ಬಿನ್ ನಾರಾಯಣಪ್ಪ ಕ್ರಯ ಪ.ರಿ.ನಂ. 3023/69-70 ಎಂಬುದಾಗಿ ನಮೂದಾಗಿದ್ದು ಈ ಬಗ್ಗೆ ಹಾಜರು ಪಡಿಸಿರುವ ಕ್ರಯ ಪತ್ರ ಪರಿಶೀಲಿಸಲಾಗಿ ಚಿಕ್ಕ ಕೆಂಪಣ್ಣ ರವರಿಗೆ ಎಸ್.ಎ.ಗುಡೇಗೌಡ ಬಿನ್ ಅಣ್ಣೇಗೌಡ ರವರಿಂದ ಕ್ರಯವಾಗಿರುತ್ತದೆ. ನಂತರ ಚಿಕ್ಕ ಕೆಂಪಣ್ಣ ನಿಂದ ಅಕ್ಕಮ್ಮ ರವರಿಗೆ ಕ್ರಯ ಪ.ರಿ.ನಂ. 3458/77-78 ದಿನಾಂಕ 24/01/1978 ರಂತೆ ಕ್ರಯ ವಾಗಿರುತ್ತದೆ. ಸದರಿ ಅಕ್ಕಮ್ಮ ರವರು ವಿವಾದಿತ ಜಮೀನನ್ನು ಮುನಿಯಮ್ಮ ಬಿನ್ ದೊಡ್ಡತಮ್ಮಣ್ಣ ಮತ್ತು ಸಾಕಮ್ಮ ಬಿನ್ ಪುಟ್ಟಮ್ಮ ರವರಿಗೆ ಪ.ರಿ.ನಂ. 66/85-86 ದಿನಾಂಕ 29/10/1985 ರಂತೆ ವಿಲ್ ಮಾಡಿದ್ದು, ವಿಲ್ ಪತ್ರದಂತೆ ಖಾತೆ ಮಾಡುವಾಗ ಎಂ.ಆರ್. 27/97-98 ರಲ್ಲಿ ವಿಲ್ ಪತ್ರದ ಸಂಖ್ಯೆ 3889/85-86 ದಿನಾಂಕ 14/10/1985 ಹಾಗೂ ಸರ್ವೆ ನಂ. 135/1 ವಿಸ್ತೀರ್ಣ 2-14 ಎಕರೆ ಎಂಬುದಾಗಿ ನಮೂದಿಸಿ ಗ್ರಾಮ ಲೆಕ್ಕಿಗರ ಷರಾದಲ್ಲಿ ಸ.ನಂ.137 ಬದಲು 135 ಕ್ಕೆ ತಾಳೆ ಇದೆ ಎಂದು ಮ್ಯುಟೇಷನ್ ಅಂಗೀಕರಿಸಿರುತ್ತಾರೆ. ಮೇಲ್ಮನವಿದಾರರು ತಮ್ಮ ವಾದದಲ್ಲಿ ವಿವಾದಿತ ಸರ್ವೆ ನಂ. 135/1 ರಲ್ಲಿ 2-35 ಎಕರೆ ಜಮೀನಿನು ದಿನಾಂಕ 14/10/1985 ರಂತೆ ವಿಲ್ ಮುಖಾಂತರ ಹಕ್ಕು ಪ್ರಾಪ್ತಿಯಾಗಿರುವುದಾಗಿ ತಿಳಿಸಿರುತ್ತಾರೆ. ಆದರೆ ಸದರಿ ವಿಲ್ ಪತ್ರವನ್ನು ಹಾಜರುಪಡಿಸಿರುವುದಿಲ್ಲ. ಮೇಲ್ಮನವಿದಾರರು ಹಾಜರು ಪಡಿಸಿರುವ ಸಿವಿಲ್ ನ್ಯಾಯಾಲಯದ ಸಂಖ್ಯೆ ಓ.ಎಸ್.59/2007 ರ ಆದೇಶದಲ್ಲಿ ದಿನಾಂಕ 14/10/1985 ರಂದು ಆಗಿರುವ ವಿಲ್ ಸರ್ವೆ ನಂ. 135/2 ಕ್ಕೆ ಸಂಬಂದಿಸಿರುತ್ತೆ. ಆದ್ದರಿಂದ ಮೇಲ್ಮನವಿದಾರರ ವಾದದಲ್ಲಿ ಯಾವುದೇ ಸಮರ್ಥನೆ ಇರುವುದಿಲ್ಲ.

...4

ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 128 ಮತ್ತು ಕಲಂ 129 ರಂತೆ ನೋಂದಾಯಿತ ದಸ್ತಾವೇಜಿನಲ್ಲಿ ನಮೂದಿಸಿರುವ ಸ.ನಂ. ಮತ್ತು ವಿಸ್ತೀರ್ಣಗಳಿಗೆ ಮಾತ್ರ ಕಂದಾಯ ಅಧಿಕಾರಿಗಳು ಹಕ್ಕು ಬದಲಾವಣೆ ಮಾಡಬಹುದೇ ವಿನಹ ಅನುಭವದಂತೆ ಆಗಲಿ ಅಥವಾ ಬೇರೆ ಸರ್ವೆ ನಂಬರ್‌ಗೆ ತಾಳೆ ಇದೆ ಎಂದು ಹಕ್ಕು ಬದಲಾವಣೆ ಮಾಡುವ ಅಧಿಕಾರ ಇರುವುದಿಲ್ಲ. ಅತಂಹ ಸಂದರ್ಭದಲ್ಲಿ ನೋಂದಾಯಿತ ಪತ್ರಕ್ಕೆ ಸೂಕ್ತ ನೋಂದಾಯಿತ ತಿದ್ದುಪಡಿ ಪತ್ರ ಪಡೆದು ನಂತರ ಖಾತೆ ಬದಲಾವಣೆ ಮಾಡಬಹುದಾಗಿರುತ್ತೆ. ಈ ಹಿನ್ನೆಲೆಯಲ್ಲಿ ಎಂ.ಆರ್.27/97-98 ರ ಹಕ್ಕು ಬದಲಾವಣೆ ಆದೇಶವು ಕಂದಾಯ ಅಧಿಕಾರಿಯ ಅಧಿಕಾರ ವ್ಯಾಪ್ತಿಗೆ ಮೀರಿದ ಆದೇಶವಾಗಿರುತ್ತದೆ. ಆದ್ದರಿಂದ ಸಹಾಯಕ ಕಮೀಷನರ್ ಮಾಡಿರುವ ಪ್ರಶ್ನಿತ ಆದೇಶದಲ್ಲಿ ಯಾವುದೇ ನ್ಯೂನ್ಯತೆ ಇರುವುದಿಲ್ಲ.

## ಆದೇಶ

ಮೇಲ್ಮನವಿಯನ್ನು ವಜಾಕರಿಸಿದೆ. ಉಭಯತ್ರರೂ ತಮ್ಮ ಹಕ್ಕುಗಳ ಬಗ್ಗೆ ಸಿವಿಲ್ ನ್ಯಾಯಾಲಯದಿಂದ ಸೂಕ್ತ ಆದೇಶ ಪಡೆದು ನಂತರ ಖಾತೆ ಕೋರಲು ಸ್ವತಂತ್ರರು.

ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ, ಬೆರಳಚ್ಚು ಮಾಡಿಸಿ ಪರಿಷ್ಕರಿಸಿದೆ. ನಂತರ ದಿನಾಂಕ03/08/2016 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಿದೆ.

ಜಿಲ್ಲಾಧಿಕಾರಿಗಳು,
ಕೋಲಾರ ಜಿಲ್ಲೆ.

ನಕಲು ಸರಿಇದೆ.

ಜಿಲ್ಲಾಧಿಕಾರಿಗಳ ಶಿರಸ್ತೇದಾರ
ಕೋಲಾರ ಜಿಲ್ಲೆ.
12/8/16